ಚೆಲುವಿನ ಕೊಳ್ಳ ಅಥವಾ ಪ್ರಕ್ಷುಬ್ಧತೆಯ ನೆಲ ಎನ್ನುವ ವಿಶೇಷಣಗಳು ಕಾಶ್ಮೀರದ ಕುರಿತಂತೆ ನಮ್ಮಲ್ಲಿನ ಜನಪ್ರಿಯ ಪರಿಕಲ್ಪನೆಗಳು. ಈ ರುದ್ರ–ರಮಣೀಯ ಭಾವಗಳ ಜುಗಲಬಂದಿಯಲ್ಲಿ ಭಾರತೀಯ ಕಾವ್ಯಮೀಮಾಂಸೆಗೆ ರಂಗಸ್ಥಳವಾದ ಕಾಶ್ಮೀರದ ವಿದ್ವತ್ ಪರಂಪರೆ ಹೆಚ್ಚು ಪರಿಚಿತವಾದುದೇನಲ್ಲ. ಭಾರತದ ಶಿರೋಭಾಗದಂತಿರುವ ಕಾಶ್ಮೀರವು ಭಾರತೀಯ ಸಂಸ್ಕೃತಿಯ 'ಶಾರದಾಪೀಠ'ವೂ ಹೌದು. ಒಂದು ಸಣ್ಣ ಭೂಭಾಗದಲ್ಲಿ ಎಷ್ಟೊಂದು ಬಗೆಯಲ್ಲಿ ಸರಸ್ವತಿಯ ಪ್ರಜ್ಞಾಸ್ತರಗಳು ಕಾಣಿಸಿಕೊಂಡವು ಎನ್ನುವುದು ಅಚ್ಚರಿ ಹುಟ್ಟಿಸುವಂತಹದ್ದು. ಸಮಸ್ತ ಭರತಖಂಡದ ಮಾನಸಿಕತೆಯೇ ಆಗಿರುವ 'ವಿವಿಧತೆಯಲ್ಲಿ ಏಕತೆ' ಎಂಬ ಸೂತ್ರದ ಮೂಲಮಾತೃಕೆಯೊಂದು ಪ್ರಾಚೀನ ಕಾಶ್ಮೀರದ ಬೌದ್ಧಿಕ ಪರಂಪರೆಯಲ್ಲಿ ಸುಪ್ತವಾಗಿದ್ದಿರಬೇಕು. ಈ ಬೌದ್ಧಿಕ ಪರಂಪರೆಯ ಮಾದರಿಗಳನ್ನು ಪರಿಚಯಿಸುವ ಈ ಬರಹ, ಕಾಶ್ಮೀರದ ಬಗ್ಗೆ ಹೆಮ್ಮೆ–ಅಭಿಮಾನವನ್ನು ಮೂಡಿಸುವಂತಹದ್ದು.

# ಶಾರದಾಪೀಠದಲ್ಲಿ ಶಾಂತರಸವೇ ಶಾಸನ

